ವಿಶ್ವವಾಣಿ

ಸಂಪಾದಕೀಯ

ಯುಗಾದಿ ಭರವಸೆಯ ದ್ಯೋತಕ

ಇಂದು ದೇಶಾದ್ಯಂತ ಯುಗಾದಿಯನ್ನು ಸಂಭ್ರಮದಲ್ಲಿ ಆಚರಿಸುವಂತಹ ವಾತಾವರಣ ಮರೆಯಾಗಿದೆ. ಕರೋನಾ ಎಂಬ ಮಹಾಮಾರಿಯಿಂದಾಗಿ ಈ ಬಾರಿಯ ಯುಗಾದಿಯಲ್ಲಿ ಬೆಲ್ಲಕ್ಕಿಂತಲೂ ಬೇವಿನ ಪಾತ್ರ ಹೆಚ್ಚಾದಂತಾಗಿದೆ. ಯುಗಾದಿಯ ಮೂಲವೇ ಹೊಸದರ ಆರಂಭ. ಆದ್ದರಿಂದ ಈ ವರ್ಷದ ಸಂಕಷ್ಟಗಳನ್ನು, ಸಮಸ್ಯೆಗಳನ್ನು ನಿವಾರಿಸಿಕೊಂಡು ಹೊಸತನಕ್ಕೆ ಸಜ್ಜಾಗಬೇಕಿರುವುದು . ಯುಗಾದಿ ನಮ್ಮೆಲ್ಲರಿಗೂ ನೀಡುತ್ತಿರುವ ತಿಳಿವಳಿಕೆಯ ಪಾಠ. ಕರೋನಾ ದಂತಹ ಮಾರಕ ಕಾಯಿಲೆ ನಮ್ಮನ್ನು ಕಂಗೆಡಿಸಿದೆ. ಜನಜೀವನ ನಮ್ಮನ್ನು ಅಸ್ತವ್ಯಸ್ತಗೊಳಿಸಿದೆ. ಜತೆಗೆ ಸುರಕ್ಷತೆಯ ವಿಷಯದಲ್ಲಿ ಬಹಳಷ್ಟು ಮಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಬೇಕಿರುವ ಪಾಠಗಳನ್ನು ಕಲಿಸಿದೆ. ಇಂದು ತಂತ್ರ ಜ್ಞಾನ, ವಿಜ್ಞಾನ ಕ್ಷೇತ್ರಗಳು ಮುಂದು ವರಿದಷ್ಟೇ ಪ್ರಮಾಣ ದಲ್ಲಿ ಹೊಸ ಹೊಸ ಕಾಯಿಲೆಗಳು, ಮಾರಕ ಸೋಂಕುಗಳು ಜನ್ಮ ಪಡೆಯುತ್ತಿವೆ ಎಂಬುದನ್ನು ಸಹ ಕಾಣುತ್ತಿದ್ದೇವೆ. ಕೃತಕ ಚಂದ್ರನನ್ನೇ ಸೃಷ್ಟಿಸಲು ಹೊರಟಿದ್ದ ಚೀನಾ ದೇಶ ಇದೀಗ ಕರೋನಾ ಸೋಂಕಿನಿಂದ ಕಂಗಾಲಾಗಿದೆ. ಈ ದೇಶ ಒಂದಷ್ಟು ಸುಧಾರಣೆ ಕಾಣುತ್ತಿದೆ ಎನ್ನುವಷ್ಟರಲ್ಲಿ ಇದೀಗ ಮತ್ತೊಂದು ವೈರಸ್ ಚೀನಾವನ್ನು ಆವರಿಸಿದೆ. ಇವುಗಳನ್ನೆಲ್ಲ ಗಮನಿಸಿದಾಗ ಈ ಬಾರಿಯ ಯುಗಾದಿಯು ನಮಗೆ ನಿಸರ್ಗದ ಸಹಜತೆ ಕಾಪಾಡಿ ಕೊಳ್ಳುವುದರ ಜತೆಗೆ ಪರಿಸರ ಕಾಳಜಿ, ಸ್ವಚ್ಛತೆಯ ಮಹತ್ವವನ್ನು ಮತ್ತೊಮ್ಮೆ ಬೋಧಿಸಿದಂತೆ ಕಂಡುಬರುತ್ತಿದೆ. ಇಂತಹ ದಿನಗಳಲ್ಲಿ ನಾವು ಕರೋನಾ ಎಂಬ ಮಾರಕ ಕಾಯಿಲೆಯ ಬಗ್ಗೆ ಆತಂಕ ಪಡದೆ, ಅದನ್ನು ಸಂಪೂರ್ಣ ವಾಗಿ ಹೋಗಲಾಡಿಸುವಲ್ಲಿ ಪಣತೊಡಬೇಕಿದೆ. ಇದಕ್ಕಾಗಿ ಸರಕಾರ ಸೂಚಿಸುವ ಸಲಹೆಗಳನ್ನು ಪಾಲಿಸುವುದು ನಮ್ಮ ಕರ್ತವ್ಯ ಆಗಬೇಕಿದೆ. ಕರೋನಾ ಎಂಬ ಮಾರಕ ಕಾಯಿಲೆಯನ್ನು ನಿರ್ಮೂಲನೆಗೊಳಿಸಿ, ಹೊಸ ದೊಂದು ಚೈತನ್ಯ ಪಡೆಯಲು ಇಡೀ ದೇಶವೇ ಸಜ್ಜಾಗಬೇಕಿದೆ. ಇಂತಹ ದೊಂದು ಬೆಳವಣಿಗೆಯ ಆರಂಭಕ್ಕೆ ಯುಗಾದಿಯೇ ಮುನ್ನುಡಿಯಾಗಲಿ. ಯುಗಾದಿ ಎಂದರೆ ಕೇವಲ ಸಂಭ್ರಮವಲ್ಲ, ಸಡಗರವಲ್ಲ. ಹೊಸ ಬದುಕಿನ, ಹೊಸ ಬೆಳವಣಿಗೆಯ ಆಶಯ. ಆದ್ದರಿಂದ ಪ್ರಸ್ತುತ ನಮ್ಮ ದೇಶ ಎದುರಿಸುತ್ತಿರುವ ಮಹಾಮಾರಿ ನಿರ್ಮೂಲನೆಗೆ ಯುಗಾದಿಯೇ ಚಾಲನೆಯ ದಿನವನ್ನಾಗಿ ಭಾವಿಸೋಣ.

ಸೊಂಪಾದಕೀಯ

ವರ್ಕ್ ಫ್ರಂ ಹೋಮ್

ಕರೋನಾ ಹಾವಳಿಯಿಂದಾಗಿ ಇಡೀ ರಾಜ್ಯ, ರಾಷ್ಟ್ರ ಲಾಕ್‌ಡೌನ್ ಆಗಿದೆ. ವೈರಸ್ ಹರಡುವುದನ್ನು ತಡೆಗಟ್ಟಲು ಎಲ್ಲರೂ ಮನೆಯಲ್ಲೇ ಉಳಿಯಿರಿ, ಮನೆಬಿಟ್ಟು ಆಚೆ ಬರಬೇಡಿ ಅಂತ ಎಲ್ಲರೂ ಹೇಳ್ತಾನೇ ಇದ್ದಾರೆ. ಮಕ್ಕಳ ಹೋಂ ವರ್ಕ್ ಹಾಗೂ ನೌಕರರ ವರ್ಕ್ ಫಂ ಹೋಮ್ ಎರಡೂ ಒಂದೇ. ಬಲು ಕಷ್ಟ ಕಷ್ಟ. ಹೀಗೆ ಕಷ್ಟ ಅನ್ನೋವ್ರಿಗಾಗಿಯೇ ಹೊಸ ಹೊಸ ಆ್ಯಪ್‌ಗಳು ಬಂದಿವೆಯಂತೆ. ಇದರ ಜತೆಗೆ ಸೆಲೆಬ್ರಿಟಿಗಳೂ ಈ ವರ್ಕ್ ಫ್ರಂ ಹೋಮ್ ಕಾಯಿಲೆಗೆ ಮನೆಮದ್ದು ಸೂಚಿಸಿದ್ದಾರೆ. ಅವರು ಬಿಡಿ. ಎಲ್ಲಾದಕ್ಕೂ ಪರಿಹಾರ ಹೇಳ್ತಾರೆ. ಒಂಥರಾ ಧನ್ವಂತರಿ ಇದ್ದಂಗೆ. ಕತ್ರೀನಾ ಕೈಫ್ ಎಂಬ ಬಿನ್ನಾಣಗಿತ್ತಿ, ಪಾತ್ರೆ ತೊಳೆಯೋದು ಹೇಗೆ ಎಂದು ತಿಳಿಸುವ ವಿಡಿಯೋ ಮಾಡಿ ಬಿಟ್ಟಿದ್ದಾಳೆ. ಇವಳನ್ನು ನೋಡಿಯೇ ಪಾತ್ರೆ ತಿಕ್ಕೋದು ಕಲಿಯಬೇಕೇ ಅಂತ ಹೌಸ್‌ವೈಫ್, ಅಲ್ಲಲ್ಲ ಹೋಂ ಮೇಕರ್‌ಗಳು ಮೂತಿ ಸೊಟ್ಟಗೆ ಮಾಡಿ ಕೇಳ್ತಾ ಇದ್ದಾರೆ. ಪ್ರತಿದಿನ, ವರ್ಷದ 356 ದಿನವೂ ಇದೇ ಕೆಲಸ ಮಾಡ್ತೀವಿ, ಈಗ ದೊಡ್ಡದಾಗಿ ಬಂದ್‌ಬಿಟ್ಲು ಪಾತ್ರೆ ತಿಕ್ಕೋದು ಹೇಳ್‌ಕೊಡೋಕೆ ಅಂತ ಉರಿದು ಬೀಳ್ತಿದ್ದಾರೆ. ಹೌದಲ್ವಾ ಮತ್ತೆ. ಅವರು ಹೇಳೋದ್ರಲ್ಲೂ ಪಾಯಿಂಟ್ ಇದೆ. ಅದೂ ಅಲ್ಲದೆ ಗಂಡ ಮಕ್ಕಳು ಮೂರೊತ್ತೂ ಮನೆಯಲ್ಲೇ ಬಿದ್ದಿರುವಾಗ ಮೂರು ಮತ್ತೊಂದು ಪಾತ್ರೆಗಳು ಹೆಚ್ಚಾಗಿಯೇ ಬೀಳ್ತಾವೆ. ಕರೋನಾ ಅಂತ ಮನೆಗೆಲಸದವಳು ಬೇರೆ ಬರಲ್ಲ. ಎಲ್ಲವೂ ಅವರ ತಲೆಗೇ. ಕೆಲಸದವರು ಬರದೇ ಇದ್ರೂ ಅವರ ಸಂಬಳ ಕಟ್ ಮಾಡಬೇಡ ಅಂತ ಫ್ರೀ ಅಡ್ವೈಸ್ ಬೇರೆ ಕೊಡ್ತಾರೆ. ಹಾಗಾದರೆ ನೀವೇ ಪಾತ್ರೆ ತೊಳೀರಿ ಅಂದ್ರೆ, ಮುಖ ಸೊಟ್ಟಗೆ ಮಾಡ್ತಾರೆ. ಇಲ್ಲವೇ ವಾದಕ್ಕಿಳಿಯುತ್ತಾರೆ. ವರ್ಕ್ ಫ್ರಂ ಹೋಮ್ ಅಂದ್ರೆ, ಮನೆಯಲ್ಲಿ ಕುಳಿತು ಆಫೀಸ್ ಕೆಲಸ ಮಾಡೋದೋ ಅಥವಾ ಮನೆಗೆಲಸ ಮಾಡೋದೋ ಅಂತ ಪಾಟೀಸವಾಲು ಹಾಕುತ್ತಾರೆ. ಅಂತೂ ಈ ಕರೋನಾ ಯಾಕಾದರೂ ಬಂತೋ ಸವತಿ ಥರ ಅಂತ ಹೆಣ್ ಹೆಂಗಸರು ಕೈಕೈ ಹಿಸುಕಿಕೊಳ್ಳುತ್ತಿದ್ದಾರೆ. ಇತ್ಲಾಗೆ ಬಿಡುಬೀಸಾಗಿ ಓಡಾಡಿಕೊಂಡಿದ್ದ ಗಂಡಸರಿಗೂ ಕರೋನಾ ಬೇಡಿ ಬಿದ್ದಿದೆ. ಹೋಗಲಿ ಹಾಯಾಗಿ ಹಬ್ಬ ಆಚರಿಸುವಂತೆಯೂ ಇಲ್ಲ. ಶಾಪಿಂಗ್ ಇಲ್ಲ, ಔಟಿಂಗ್ ಇಲ್ಲ. ಮನೆಯಲ್ಲೇ ಕುಳಿತು ಒಳ್ಳೇ ಅಡುಗೆ ಮಾಡ್ಕೊಂಡು ಊಟ ಮಾಡಿ ಅಂತ ಬಿಟ್ಟಿ ಸಲಹೆ ಬೇರೆ. ಇಂಥವರಿಗೆ ಈಗೊಂದು ವಾರದಿಂದ ಅದನ್ನೇ ತಾನೇ ಮಾಡ್ತಾ ಇರೋದು ಅಂತ ಹೇಳಬೇಕೆನಿಸುತ್ತೆ. ಏನ್ಮಾಡೋದೋ ಏನೋ. ಎಲ್ಲರೂ ಒಂಥರಾ ಹೋಂ ಸಿಕ್ ಆಗಿರುವುದಂತೂ ನಿಜ.

ಸಂಪಾದಕರ ಸದ್ಯಶೋಧನೆ

ಶಟ್ ಡೌನ್ ಮತ್ತು ಲಾಕ್ ಡೌನ್ !

ದೇಶಾದ್ಯಂತ ಎಲ್ಲರ ಬಾಯಲ್ಲೂ ಲಾಕ್ ಡೌನ್ ಪದ ಹರಿದಾಡಲಾರಂಭಿಸಿದೆ. ಪ್ರಧಾನಿಯ ಬಾಯಲ್ಲಿ 'ಜನತಾ ಕರ್ಫ್ಯೂ' ಎಂಬ ಪದ ಬಂದ ಹಾಗೆ, ಈಗ 'ಲಾಕ್ ಡೌನ್' ಎಂಬ ಪದವೂ ಬಂದಿದೆ. ಈ ಲಾಕ್ ಡೌನ್ ಪದಕ್ಕೆ ಕನ್ನಡದಲ್ಲಿ ಬೀಗಮುದ್ರೆ ಹಾಕುವುದು, ಬೀಗ ಜಡಿಯುವುದು, ಬೀಗ ಹಾಕುವುದು ಎಂದು ಹೇಳಬಹುದು. ಆದರೆ ಇಡೀ ದೇಶಕ್ಕೆ ಬೀಗಮುದ್ರೆ ಹಾಕುವುದು ಹೇಗೆ ಎಂಬ ಪ್ರಶ್ನೆ ಎದುರಾದಾಗ ಈ ಪದದ ವ್ಯಾಪ್ತಿ, ಮಹತ್ವ, ಅಗಾಧತೆ, ತೀವ್ರತೆ ಅರ್ಥವಾಗುತ್ತದೆ. ಈ ಪದವನ್ನು ಮೊದಲ ಬಾರಿಗೆ ಜೈಲಿನಲ್ಲಿರುವ ಖೈದಿಗಳಿಗೆ ಬಳಸಲಾಗಿತ್ತು. ಹೊರಗೆ ದಂಗೆ ಅಥವಾ ಪ್ರಕ್ಷುಬ್ಧ ಪರಿಸ್ಥಿತಿ ತಲೆದೋರಿದಾಗ, ಜೈಲಿನಲ್ಲಿರುವ ಖೈದಿಗಳನ್ನು ಹೊರಗೆ ಬಿಡದೇ, ಅವರಿದ್ದ ಕೋಣೆಯಲ್ಲಿಯೇ ಕೂಡಿಡುವುದಕ್ಕೆ ಲಾಕ್ ಡೌನ್ ಎಂಬ ಪದವನ್ನು ಮೊದಲ ಬಾರಿಗೆ ಬಳಸಲಾಯಿತು. ಇದಕ್ಕೆ ಪದಕೋಶಗಲ್ಲಿರುವ ವ್ಯಾಖ್ಯಾನ ಹೀಗಿದೆ – The confining of prisoners to their cells, as following a riot or other disturbance outside. ಆದರೆ ಕಾಲಕ್ರಮೇಣ ಈ ಪದದ ಅರ್ಥ ಸನ್ನಿವೇಶಕ್ಕೆ ತಕ್ಕ ಹಾಗೆ ಬದಲಾಗುತ್ತಾ ಬಂದಿದೆ. ಭಾರತ ಸರಕಾರ ಈಗ ಕಂಡು ಕೇಳರಿಯದ ಇಪ್ಪತ್ತೊಂದು ದಿನಗಳ ದೇಶವ್ಯಾಪಿ ಲಾಕ್ ಡೌನ್ ಘೋಷಿಸಿದ ಹಿನ್ನೆಲೆಯಲ್ಲಿ ಅದರ ಅರ್ಥ ಸಂಪೂರ್ಣ ಭಿನ್ನಾವಾಗಿದೆ. ಭಾರತ ಸರಕಾರ ಅದರ ವ್ಯಾಖ್ಯೆಯನ್ನು ಈ ರೀತಿ ಹೇಳಿದೆ – A lockdown is an emergency protocol that prevents people from leaving a given area. A full lockdown will mean you must stay where you are and not exit or enter a building or the given area. ಲಾಕ್ ಡೌನ್ ಅಂದರೆ ತುರ್ತುಸ್ಥಿತಿಯ ಒಂದು ಶಿಷ್ಟಾಚಾರ. ಅದರ ಪ್ರಯುಕ್ತ ಯಾರೂ ಒಂದು ನಿಶ್ಚಿತ ಪ್ರದೇಶವನ್ನು ಬಿಟ್ಟು ಹೋಗುವಂತಿಲ್ಲ. ಸಂಪೂರ್ಣ ಲಾಕ್ ಡೌನ್ ಅಂದರೆ ನೀವು ಎಲ್ಲಿರುತ್ತೀರೋ ಅಲ್ಲಿಯೇ ಇರುವುದು. ಇರುವ ಜಾಗದಿಂದ ಕದಲುವಂತಿಲ್ಲ ಅಥವಾ ಬೇರೆ ಪ್ರದೇಶ ಮತ್ತು ಕಟ್ಟಡ ಪ್ರವೇಶಿಸುವಂತಿಲ್ಲ. ನೀವು ನಿಮ್ಮ ಮನೆಯಲ್ಲಿ ಇದ್ದೀರೆಂದರೆ ಅದನ್ನು ಬಿಟ್ಟು ಹೊರಗೆ ಹೋಗಬಾರದು. ಬೇರೆಯವರೂ ಪ್ರವೇಶಿಸಬಾರದು. ಅಂದರೆ ದೇಶವಾಸಿಗಳೆಲ್ಲ ಎಲ್ಲೆಲ್ಲಿ ಇದ್ದಾರೋ ಅಲ್ಲಿಯೇ ಇರುವುದು. ಜನಸಂಚಾರವನ್ನು ನಿರ್ಬಂಧಿಸುವುದು ಇದರ ಮುಖ್ಯ ಉದ್ದೇಶ. ಹಾಗಂತ ಈ ಸಂದರ್ಭದಲ್ಲಿ ಅತ್ಯಗತ್ಯ ಸೇವೆಗಳು ಜನರಿಗೆ ತೆರೆದಿರುತ್ತವೆ. ಅವನ್ನು ಬಿಟ್ಟು ಉಳಿದೆಲ್ಲವೂ ಬಂದ್. ಸೋಂಕು ರೋಗ ನಿಯಂತ್ರಣಕ್ಕೆ ಲಾಕ್ ಡೌನ್ ಘೋಷಿಸಿದ್ದು ಇದೇ ಮೊದಲು. ಭಾರತದಂಥ ದೇಶದಲ್ಲಿ ಕರೋನಾದಂಥ ಮಹಾಮಾರಿ ತಡೆಗೆ ಈ ಸಂದರ್ಭದಲ್ಲಿ ಬೇರೆ ದಾರಿಯೇ ಇರಲಿಲ್ಲ. ಈ ಪದ ಈಗ ಏಕಾಏಕಿ ಇಡೀ ರಾಷ್ಟ್ರಾದ್ಯಂತ ಅವಿದ್ಯಾವಂತರ ಬಾಯಲ್ಲೂ ನುಲಿಯುವಂತಾಗಿದೆ. ಇಷ್ಟು ದಿನಗಳ ಕಾಲ ನಾವು ಶಟ್ ಡೌನ್ ಎಂಬ ಪದವನ್ನು ಮಾತ್ರ ಕೇಳಿದ್ದೆವು. ಮೊನ್ನೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶಟ್ ಡೌನ್ (Our country wasn't built to be shut down') ಎಂಬ ಪದವನ್ನು ಬಳಸಿದರು. ಅವರು ಲಾಕ್ ಡೌನ್ ಎಂದು ಹೇಳಲಿಲ್ಲ. ಆದರೆ ಈ ಎರಡೂ ಪದಗಳಿಗೆ ಹೆಚ್ಚು ವ್ಯತ್ಯಾಸವಿಲ್ಲ. ಶಟ್ ಅಂದರೆ ಮುಚ್ಚು ಎಂದರ್ಥ. ಲಾಕ್ ಅಂದರೆ ಬೀಗ ಜಡಿ ಎಂದರ್ಥ. ಆದರೆ ಶಟ್ ಡೌನ್‌ಗಿಂತ ಲಾಕ್ ಡೌನ್ ಎಂಬ ಪದದಲ್ಲಿ ಹೆಚ್ಚು ಭೀತಿ, ಬಲ, ಪರಿಣಾಮ ಇರುವಂತಿದೆ.

ಕರೋನಾ ಹರಡಲು ಕಾರಣ ಸುಶಿಕ್ಷಿತರೇ!

ಬೇಟೆ

ಜಯವೀರ ವಿಕ್ರಮ್ ಸಂಪತ್ ಗೌಡ
ಅಂಕಣಕಾರರು

ಭೇಷ್ ಪ್ರಧಾನಿ ಮೋದಿಯವರೇ, ನಿಮ್ಮ ನಿರ್ಧಾರ ಸರಿ ಯಾಗಿಯೇ ಇದೆ.

ಅನುಮಾನವೇ ಇಲ್ಲ, ಇಪ್ಪತ್ತೊಂದು ದಿನಗಳ ಲಾಕ್ ಡೌನ್ ಘೋಷಿಸದೇ ಇದ್ದಿದ್ದರೆ, ಈ ದೇಶ ಕಂಡು ಕೇಳರಿಯದ ದುರಂತಕ್ಕೆ ಸಾಕ್ಷಿ ಆಗಬೇಕಾಗುತ್ತಿತ್ತು. ಕಾರಣ ಈ ದೇಶದ ಸುಶಿಕ್ಷಿತ ಜನರಿಗೆ ಬುದ್ಧಿ ಹೇಳುವುದು ಬಹಳ ಕಷ್ಟ. ಇವರಿಗೆ ಯಾವುದನ್ನು ಮಾಡಬೇಡಿ ಅಂತ ಹೇಳುತ್ತೇವೋ ಅದನ್ನೇ ಮಾಡುತ್ತಾರೆ. ಇವರಿಗೆ ನಿಯಮಗಳನ್ನು ಪಾಲಿಸಿ ಗೊತ್ತಿಲ್ಲ. ಎಲ್ಲಾ ನಿಯಮಗಳನ್ನೂ ಉಲ್ಲಂಘಿಸಿಯೇ ಆಚರಿಸುತ್ತಾರೆ. ಅದು ಅವರ ಹುಟ್ಟುಗುಣ. ಹುಟ್ಟುಗುಣ ಘಟ್ಟ ಹತ್ತಿದರೂ ಹೋಗೊಲ್ಲ ಅಂತಾರಲ್ಲ, ನಮ್ಮ ಜನರಿಗೆ ಕಾನೂನು ಮುರಿಯುವುದು, ಕ್ಷಮೆ ಯಾಚಿಸುವುದು, ಪುನಃ ಅದೇ ತಪ್ಪನ್ನು ಮಾಡುವುದು ಮಾಮೂಲಿಯಾಗಿ ಹೋಗಿದೆ. ಇಂಥ ಸಂದಿಗ್ಧ ಸಮಯದಲ್ಲಿ ಪ್ರಧಾನಿಯವರು ಇಡೀ ದೇಶಕ್ಕೆ ಬೀಗ ಜಡಿಯಲು ನಿರ್ಧರಿಸಿದ್ದು ಅತ್ಯಂತ ಸಮಂಜಸ ನಿರ್ಧಾರ. ಅವರಿಗೆ ಗೊತ್ತು, ನಮ್ಮ ಜನರಿಗೆ ಸುಮ್ಮನೆ ಹೇಳಿದರೆ ಕೇಳುವುದಿಲ್ಲ ಎಂದು. ಯಾರೂ ಮನೆಯಿಂದ ಹೊರಗೆ ಬರಬೇಡಿ ಅಂತ ಮುಖ್ಯಮಂತ್ರಿ ಹೇಳಿದರೂ ಕೇಳಲಿಲ್ಲ. ಇದರಿಂದ ಆಗಬಹುದಾದ ಅಪಾಯವನ್ನು ಊಹಿಸಿ ಪ್ರಧಾನಿ ಲಾಕ್ ಡೌನ್ ಮಾಡುವ ನಿರ್ಧಾರ ತೆಗೆದುಕೊಂಡಿದ್ದು ನಮ್ಮ ಸುಶಿಕ್ಷಿತರನ್ನು ಗಮನದಲ್ಲಿರಿಸಿಕೊಂಡು ಎಂಬುದನ್ನು ಮರೆಯಬಾರದು. ಅವರೇ ನಮ್ಮ ದೇಶದಲ್ಲಿ ಈ ಕರೋನಾ ವೈರಸ್ ಹರಡಲು ಕಾರಣವಾದವರು!

ಕರ್ನಾಟಕ ಲಾಕ್ ಡೌನ್ ಘೋಷಿಸಿದ ಮರುದಿನ 'ವಿಶ್ವವಾಣಿ' ಪ್ರಧಾನ ಸಂಪಾದಕರು ಒಂದು ಟ್ವೀಟ್ ಮಾಡಿದ್ದರು – 'ಮನೆಯಿಂದ ಹೊರಗೆ ಹೋಗಿ ವೋಟ್ ಮಾಡಿ ಎಂದು ಸರಕಾರ ಹೇಳುತ್ತದೆ. ಆದರೆ ಮತದಾನದ ದಿನ ಯಾರೂ ಮನೆಯಿಂದ ಹೊರಗೆ ಬರುವುದೇ ಇಲ್ಲ. ಆದರೆ ಈಗ ಕರೋನಾ ಭೀತಿಯ ಹಿನ್ನೆಲೆಯಲ್ಲಿ ಮನೆಯಿಂದ ಹೊರಬರಬೇಡಿ ಎಂದು ಹೇಳಿದರೂ, ಅನೇಕರು ಮನೆಗಳಿಂದ ಹೊರಬರುತ್ತಿದ್ದಾರೆ. ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ದೀರ್ಘಕಾಲ ಬಾಳಲಿ'

ಈ ಜನರಿಗೆ ಆ ಭಗವಂತನೇ ಖುದ್ದು ಬಂದು ಹೇಳಿದರೂ ಕೇಳುವುದಿಲ್ಲ. ಇನ್ನು ಈ ಯಡಿಯೂರಪ್ಪ, ಆ ಮೋದಿಯೇ ಬಂದು ಹೇಳಿದರೆ ಕೇಳುತ್ತಾರಾ? ಇಂಪಾಸಿಬಲ್. ನಮ್ಮ ಜನರಿಗೆ ಬುದ್ಧಿ ಬರೋದು ಅದು ಕೆಟ್ಟ ಮೇಲೆಯೇ. ತಾವು ಕೆಟ್ಟರೆ ಪರವಾಗಿರಲಿಲ್ಲ, ಆದರೆ ತಾವು ಕೆಡುವುದಲ್ಲದೇ ನೆರೆಯವರನ್ನೂ ಕೆಡಿಸಿ ಹೋಗುತ್ತಾರೆ. ಇಡೀ ಜಗತ್ತು ಹೇಳುತ್ತಿದೆ, ಕರೋನಾ ವೈರಸ್ ತಡೆಗಟ್ಟಲು ಇರುಗ ಏಕೈಕ ಮಾರ್ಗವೆಂದರೆ, ಮನೆಯಿಂದ ಹೊರಗೆ ಬರದಿರುವುದು ಅಥವಾ ಮನೆಯಲ್ಲಿಯೇ ಉಳಿಯುವುದು. ಕರೋನಾ ವೈರಾಣುಗಳು ಜನರಿಂದ ಜನರಿಗೆ ಸೋಂಕುವುದನ್ನು ತಪ್ಪಿಸಲು ಅದೊಂದೇ ಪರಿಹಾರ. ಒಂದು ವಾರ, ಹತ್ತು ದಿನ ಜನರೆಲ್ಲಾ ತಮ್ಮ ತಮ್ಮ ಮನೆಯೊಳಗೇ ಉಳಿದರೆ, ಸೋಂಕು ತಟ್ಟುವುದನ್ನು ತಕ್ಷಣಕ್ಕೆ ನಿಯಂತ್ರಣಕ್ಕೆ ತರಬಹುದು. ಇದು ನಮ್ಮ ಮನೆಯ ನಾಯಿಗೂ ಗೊತ್ತು. ಆ ಪರಿ ಸಂದೇಶಗಳು ವಾಟ್ಸಪ್ ಮತ್ತು ಟಿವಿಗಳಲ್ಲಿ ಪ್ರಸಾರವಾಗಿವೆ. ಜನ ಹೋದಲ್ಲಿ ಬಂದಲ್ಲಿ ಅದನ್ನೇ ಮಾತಾಡಿಕೊಳ್ಳುತ್ತಿದ್ದಾರೆ. ಆದರೂ ಜನ ಹಾದಿ- ಬೀದಿಗಳಲ್ಲಿ ಅಲೆಯುವುದನ್ನು ಬಿಟ್ಟಿಲ್ಲ.

ಮೊನ್ನೆ ಕರ್ನಾಟಕ ಲಾಕ್ ಡೌನ್ ಆಗುತ್ತಿದ್ದಂತೆ, ಜನ ಮುಗಿಬಿದ್ದು ಊರಿಗೆ ಹೊರಟರು. ಎಲ್ಲರಿಗೂ ಹೇಗಾದರೂ ಮಾಡಿ ತಮ್ಮ ತಮ್ಮ ಊರುಗಳನ್ನು ಸೇರಿಬಿಡಬೇಕು ಎಂಬ ಧಾವಂತ. ಜನನಿಬಿಡ ಸ್ಥಳಗಳಲ್ಲಿ ತಾವು ಹೋಗಿ ನಿಂತರೆ ತಮಗೆ ಸೋಂಕು ತಗಲಬಹುದು, ತಮ್ಮಿಂದ ಇತರರಿಗೂ ಇದು ಹರಡಬಹುದು ಎಂಬ ಸಾಮಾನ್ಯ ಜ್ಞಾನ ಸಹ ಇಲ್ಲದವರಂತೆ ವರ್ತಿಸಿದ್ದನ್ನು ನೋಡಿದರೆ ನಮ್ಮ ಜನರಿಗೆ ಈ ಜನ್ಮದಲ್ಲಿ ಬುದ್ಧಿ ಬರುವ ಲಕ್ಷಣಗಳಂತೂ ಕಾಣುವುದಿಲ್ಲ. ಅಂದು ಬೆಂಗಳೂರಿನ ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಜನ ಜಮಾಯಿಸಿದ್ದರು. ಇವರ ಪೈಕಿ ಹತ್ತಾರು ಮಂದಿ ಕರೋನಾ ಸೋಂಕಿತರು ಇದ್ದರೂ ಸಾಕು, ಅವರೆಲ್ಲ ಅದನ್ನು ಕರ್ನಾಟಕದ ಹಳ್ಳಿಹಳ್ಳಿಗೆ ಹಬ್ಬಿಸುವುದು ಗ್ಯಾರಂಟಿ. ಇಂಥ ಸನ್ನಿವೇಶದಲ್ಲಿ ಮನೆಯಿಂದ ಹೊರಗೇ ಬೀಳಬಾರದು. ಹಾಗಿರುವಾಗ ಒಂದೇ ಕಡೆ ಹತ್ತಾರು ಸಾವಿರ ಜನ ಸೇರಿದರೆ ಏನಾಗಬೇಡ? ಅಂದು ಬೆಂಗಳೂರಿನಿಂದ ತುಮಕೂರಿಗೆ ಹೋಗಲು ಜನ ಮೂರ್ನಾಲ್ಕು ಗಂಟೆ ತೆಗೆದುಕೊಂಡರು. ಎಲ್ಲಾ ಟೋಲ್ ಗೇಟ್ ಗಳಲ್ಲಿ ಜನ ಜಮಾಯಿಸಿದ್ದರು. ಇಂಥ ಕಡೆಗಳಲ್ಲಿ ಜನ ಜಮಾಯಿಸಲೇ ಕೂಡದು. ಆದರೆ ಆ ಜನರಿಗೆ ಹೇಳುವವರಾದರೂ ಯಾರು? ದಡ್ಡರಿಗಾದರೆ ಬುದ್ಧಿ ಹೇಳಬಹುದು. ಅಕ್ಷರ ಬಾರದವರಿಗೆ ತಿಳಿಸಿ ಹೇಳಬಹುದು. ಅಮಾಯಕ ಹಳ್ಳಿಯ ಜನರಿಗೆ ಹೇಳಿದರೆ ಅವರು ಅದನ್ನು ಅರ್ಥ ಮಾಡಿಕೊಳ್ಳುತ್ತಾರೆ. ತಿಳಿಸಿ ಹೇಳಿದಾಗ ಗಮನವಿಟ್ಟು ಕೇಳುವವರಿಗಾದರೆ ಏನನ್ನು ಬೇಕಾದರೂ ಹೇಳಬಹುದು. ಸಮಸ್ಯೆ ಆಗುವುದು ಅಕ್ಷರಸ್ಥರಿಗೆ ಅಥವಾ ಸೋ ಕಾಲ್ಡ್ ಎಜುಕೇಟೆಡ್ ಫೆಲೋಸ್‌ಗಳಿಗೆ. ಇವರು ಮಹಾ ಅಪಾಯಕಾರಿಗಳು. ಇವರಿಗೆ ಯಾರು ಹೇಳಿದರೂ ಅವರು ತಮಗೆ ತೋಚಿದಂತೆ ವರ್ತಿಸುತ್ತಾರೆ. ಅವರು ಎಲ್ಲರನ್ನೂ ಮೀರಿದವರು. ನಮ್ಮ ಸಮಾಜಕ್ಕೆ ಇವರಿಂದ ಆಗುತ್ತಿರುವಷ್ಟು ಸಮಸ್ಯೆ ಬೇರೆ ಯಾರಿಂದಲೂ ಆಗುತ್ತಿಲ್ಲ. ಕೋತಿ ತಾನು ಕೆಟ್ಟಿದ್ದಲ್ಲದೇ ಇಡೀ ವನವನ್ನು ಕೆಡಿಸಿತು ಎಂಬಂತೆ ಈ ಸೋ ಕಾಲ್ಡ್ ಎಜುಕೇಟೆಡ್ ಫೆಲೋಸ್ ತಮ್ಮ ಜತೆಗೆ ಇತರರನ್ನೂ ಕೆಡಿಸುತ್ತಿದ್ದಾರೆ. ಇವರಿಗೆ ಏನಂತ ಬುದ್ಧಿ ಹೇಳುವುದು? ಕಾರಣ ಇವರು ಹೇಳಿಕೇಳಿ ಬುದ್ಧಿವಂತರು, ಸುಶಿಕ್ಷಿತರು. ಆದರೆ ಶುದ್ಧ ವಿವೇಕಹೀನರು. ಸುಶಿಕ್ಷಿತರಿಗೂ, ವಿವೇಕವಂತರಿಗೂ ಬಹಳ ವ್ಯತ್ಯಾಸವಿದೆ. ಚೆನ್ನಾಗಿ ಓದಿದವರೆಲ್ಲರನ್ನೂ ವಿವೇಕವಂತರೆಂದು ಪರಿಗಣಿಸಲು ಸಾಧ್ಯವಿಲ್ಲ. ಇವರ ಸಮಸ್ಯೆಯೂ ಅದೇ.

ನನ್ನ ಆಕ್ರೋಶವಿರುವುದು ಇವರ ವರ್ತನೆ ಬಗ್ಗೆ. ಹೆಲ್ಮೆಟ್ ಧರಿಸಿಯೇ ದ್ವಿಚಕ್ರವಾಹನವನ್ನು ಓಡಿಸಬೇಕು ತಾನೇ? ಆದರೆ ಬಹುಪಾಲು ಈ ನಿಯಮ ಉಲ್ಲಂಘಿಸುವವರೆಂದರೆ ಅವರೇ – ಸುಶಿಕ್ಷಿತರೇ ಅಥವಾ ಸೋ ಕಾಲ್ಡ್ ಎಜುಕೇಟೆಡ್ ಫೆಲೋಸ್. ಕಾರು ಓಡಿಸುವವರು ಸೀಟ್ ಬೆಲ್ಟ್ ಧರಿಸಬೇಕು ತಾನೇ? ಇವರು ಮಾತ್ರ, ಅದ್ಯಾಕೋ ಕಟ್ಟಿಕೊಳ್ಳುವುದಿಲ್ಲ. ಇವರಲ್ಲಿ ಕೆಲವರು ವಿದೇಶಗಳಲ್ಲಿದ್ದು ಬಂದವರು. ಅಲ್ಲಿದ್ದಾಗ ಎಲ್ಲಾ ನಿಯಮಗಳನ್ನೂ ಚಾಚೂ ತಪ್ಪದೆ ಪಾಲಿಸಿದವರು. ನಮ್ಮ ದೇಶಕ್ಕೆ ಬಂದ ನಂತರ ಹೇಗಿದ್ದರೂ ನಡೆಯುತ್ತದೆ ಅಥವಾ ಚಲ್ತಾ ಹೈ ಮನೋಭಾವ. ಟ್ರಾಫಿಕ್ ನಿಯಮಗಳನ್ನು ಅತಿ ಹೆಚ್ಚು ಉಲ್ಲಂಘಿಸುವವರಲ್ಲಿ ಯಾರು ಅಧಿಕ ಅಂತ ನೀವು ಯಾವುದೇ ಟ್ರಾಫಿಕ್ ಪೊಲೀಸರನ್ನು ಕೇಳಿ, ಅವರು ಬೋಟೊ ಮಾಡಿ ತೋರಿಸುವುದು ಈ ಸೋ ಕಾಲ್ಡ್ ಎಜುಕೇಟೆಡ್ ಫೆಲೋಸ್‌ಗಳನ್ನೇ. ಏನೂ ಗೊತ್ತಿಲ್ಲದೇ ಇರುವವರಿಗೆ ಬಾಯಿ ಮಾತಿನಲ್ಲಿ, ಹೊಡೆದು-ಬಡಿದು ಬುದ್ಧಿ ಹೇಳಬಹುದು. ಆದರೆ ಇವರಿಗೆ ಹೇಳೋದು ಹೇಗೆ? ಇವರಿಗೆ ಎಲ್ಲಾ ಗೊತ್ತು. ನಮ್ಮ ದೇಶಕ್ಕೆ ಡೇಂಜರಸ್ ಆಗಿ ಪರಿಣಮಿಸಿರುವವರೇ ಇವರು.

ಅಷ್ಟಕ್ಕೂ ನಮ್ಮ ದೇಶಕ್ಕೆ ಕರೋನಾ ವೈರಸನ್ನು ತಂದವರಾದರೂ ಯಾರು? ಬೊಕ್ಕಸಂದ್ರದ ಬೋರೆಗೌಡ್ರ? ತುಣಚಿಕೊಪ್ಪದ ಮಗೇನಾಯ್ಕನಾ? ಬ್ಯಾಡ್ರಳ್ಳಿಯ ತಿಮ್ಮಕ್ಕನಾ? ಮುಗಟಖಾನ ಹುಬ್ಬಳ್ಳಿಯ ಶಿವಪುತ್ರಪ್ಪ ಕಲ್ಲೂರರಾ? ಇವರಾರೂ ಅಲ್ಲ, ವಿದೇಶಗಳಿಂದ ಬಂದ ಅದೇ ಸೋ ಕಾಲ್ಡ್ ಎಜುಕೇಟೆಡ್ ಫೆಲೋಸ್. ಇಡೀ ಜಗತ್ತು ಕರೋನಾ ಭೀತಿಯಲ್ಲಿ ನಡುಗುತ್ತಿದ್ದರೂ ಭಾರತ ಮಾತ್ರ ಸುರಕ್ಷಿತವಾಗಿತ್ತು. ಕರೋನಾ ವೈರಸ್ ದೂರದ ಇಟಲಿಗೆ ಹಬ್ಬಿದರೂ ಚೀನಾದ ಜತೆ ಮೂರೂವರೆ ಸಾವಿರ ಕಿಮಿ ಗಡಿ ಹಂಚಿಕೊಂಡ ಭಾರತ ಮಾತ್ರ, ಈ ಮಹಾಮಾರಿಯಿಂದ ಬಚಾವ್ ಆಗಿತ್ತು. ಇದು ವಿಶ್ವದಾದ್ಯಂತ ಅನೇಕರಿಗೆ ಅಚ್ಚರಿ ಮೂಡಿಸಿತ್ತು. ಅಮೆರಿಕ,

ಯುರೋಪ್‌ಗೆ ಹಬ್ಬಿದ ಕರೋನಾ ಪಕ್ಕದ ಭಾರತಕ್ಕೆ ಇನ್ನೂ ಯಾಕೆ ಬಂದಿಲ್ಲ ಎಂದು ಎಲ್ಲರಿಗೂ ವಿಸ್ಮಯ ಹುಟ್ಟಿಸಿತ್ತು. ಅದ್ಯಾವನೋ ಈ ಸೋ ಕಾಲ್ಡ್ ಎಜುಕೇಟೆಡ್ ಫೆಲೋ ವಿದೇಶದಿಂದ ಬಂದ ನೋಡಿ. ಬರುವಾಗ ಮೈಗೆ ಸೋಂಕನ್ನು ಅಂಟಿಸಿಕೊಂಡೇ ಬಂದಿದ್ದ. ಹಾಗೆ ಬಂದವರು ಯಾವ್ಯಾವ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದು ಅವನಿಗೆ ಗೊತ್ತಿರಲಿಲ್ಲವಾ? ಗೊತ್ತಿತ್ತು.

ಕಾರಣ ವಿದೇಶಗಳಿಂದ ಬರುವವರು ಯಾವ ಯಾವ ಕ್ರಮಗಳನ್ನು ಕೈಗೊಳ್ಳಬೇಕು ಎಂಬ ಬಗ್ಗೆ ಸಾಕಷ್ಟು ಚರ್ಚೆಯಾಗಿತ್ತು. ಸೋಷಿಯಲ್ ಮೀಡಿಯಾ ಮತ್ತು ಮಾಧ್ಯಮಗಳಲ್ಲಿ ಅದು ಬಹು ಚರ್ಚಿತ ವಿಷಯವಾಗಿತ್ತು. ವಿದೇಶದಿಂದ ಬರುತ್ತಲೇ, ಸ್ವಯಂ ಗೃಹಬಂಧನಕ್ಕೊಳಗಾಗಬೇಕಿತ್ತು. ಆದರೆ ಆತ ಹಗ್ಗ ಕಳಚಿಕೊಂಡ ಬೀಜದ ಹೋರಿಯ ಹಾಗೆ ಊರೂರು ಅಲೆದ. ಸಾವಿರಾರು ಜನರ ಮಧ್ಯೆ ಓಡಾಡಿದ. ಸಂತೆ ಪೇಟೆಗೆ ಹೋಗಿ ಬಂದ. ಮಾಡುವೆ ಸಮಾರಂಭದಲ್ಲೂ ಭಾಗವಹಿಸಿದ. ಜತೆಯಲ್ಲಿ ತನ್ನ ಮನೆಯಲ್ಲಿರುವವರಿಗೂ ಅಂಟಿಸಿದ. ಕೆಲವೇ ದಿನಗಳಲ್ಲಿ ತಾನು ತಂದಿದ್ದ 'ಮಹಾಪ್ರಸಾದ'ವನ್ನು ಎಲ್ಲರಿಗೂ ವಿತರಿಸಿದ.

ಒಂದು ವಾರದೊಳಗೆ ಈ 'ಮಹಾಪ್ರಸಾದ' ವನ್ನು ನೋಡಿದವರು, ಸೇವಿಸಿದವರು ಕರೋನಾಗೆ ತುತ್ತಾದರು. ಯಾವಾಗ ತನಗೆ ರೋಗ ಲಕ್ಷಣಗಳು ಅನುಭವಕ್ಕೆ ಬರುತ್ತಿದ್ದಂತೆ, ಬೇರೆಯವರ ಸಂಪರ್ಕಕ್ಕೆ ಹೋಗದಿದ್ದರೆ, ಕರೋನಾವನ್ನು ತಡೆಯಬಹುದಿತ್ತು. ಆದರೆ ಬೇರೆಯವರಿಗೂ ಅಂಟಿಸಲೇಬೇಕು ಎಂದು ನಿರ್ಧರಿಸಿದರೆ ಯಾರು ತಾನೇ ತಡೆಯಬಲ್ಲರು? ಕರೋನಾ ಸೋಂಕು ಹಬ್ಬಿಸಿದವರೆಲ್ಲ ಸುಶಿಕ್ಷಿತರೇ ಮತ್ತು ವಿದೇಶಗಳಿಂದ ಬಂದವರೇ, ಯಾರೂ ಏನೂ ಗೊತ್ತಿಲ್ಲದ ಹಳ್ಳಿಹೈಕರಲ್ಲವಲ್ಲ? ಕೆಲವರಂತೂ ತಮ್ಮ ಮೈಯಲ್ಲಿ ಸೋಂಕು ಇರುವುದು ಅನುಭವಕ್ಕೆ ಬಂದ ನಂತರ ಬುದ್ಧ್ಯಾಪೂರ್ವಕವಾಗಿ ಬೇರೆಯವರಿಗೆ ತಗುಲಿಸಿ ಬಂದರು. ಆಸ್ಪತ್ರೆಯಿಂದ ಓಡಿ ಹೋದರು. ಕೆಲವರು ವಿಮಾನದಲ್ಲಿ ಸಂಚರಿಸಿ ಬೇರೆ ಊರುಗಳಿಗೂ ಹೋಗಿ ಹಂಚಿ ಬಂದರು. ಇವರನ್ನು ಸುಶಿಕ್ಷಿತರು ಎಂದು ಹೇಗೆ ಕರೆಯೋದು?!

ಕರೋನಾ ಪೀಡಿತರ ಹಿನ್ನೆಲೆಯೆಲ್ಲವನ್ನೂ ನೋಡಿ. ಅವರಾರೂ ಮುಗ್ಧರಲ್ಲ. ಕರೋನಾ ವೈರಸ್‌ನ ಬಗ್ಗೆ ಗೊತ್ತಿದ್ದವರೇ. ಅದರ ಪರಿಣಾಮಗಳ ಬಗ್ಗೆ ಅರಿವಿದ್ದವರೇ. ಕರೋನಾ ವೈರಸ್ ತವರುಮನೆಯಾದ ಚೀನಾದ ವುಹಾನ್ ನಗರ ಈ ಮಹಾಮಾರಿಯ ಹೊಡೆತಕ್ಕೆ ತತ್ತರಿಸಿದಾಗ, ಜನ ಸುಮಾರು ಒಂದು ತಿಂಗಳ ಕಾಲ ಮನೆಗಳಿಂದ ಹೊರಬರಲೇ ಇಲ್ಲ. ಈ ರೋಗವನ್ನು ತಡೆಗಟ್ಟಲು ಅದೊಂದೇ ಮಾರ್ಗ ಎಂಬುದನ್ನು ಅವರು ತಕ್ಷಣ ಅರಿತುಕೊಂಡರು. ಬಹುಬೇಗ ಜಾಗೃತರಾದರು. ಇದರ ಪರಿಣಾಮ ಅಸಾಧಾರಣವಾಗಿತ್ತು. ಕರೋನಾ ಹರಡಿದ ರೀತಿಯಲ್ಲಿಯೇ ನಿಯಂತ್ರಣಕ್ಕೆ ಬಂದಿತು. ಇಂದು ವುಹಾನ್‌ನಲ್ಲಿ ಕಳೆದ ಹತ್ತು ದಿನಗಳಿಂದ ಯಾವ ಪ್ರಕರಣವೂ ಪತ್ತೆಯಾಗಿಲ್ಲ. ಚೀನಾ ದೇಶದ ಅಧ್ಯಕ್ಷರು ವುಹಾನ್‌ಗೆ ಭೇಟಿ ನೀಡಿ ಬಂದು ಜನರಲ್ಲಿ ವಿಶ್ವಾಸ ಮೂಡಿಸಿದರು. ಇನ್ನು ಒಂದು ವಾರದ ನಂತರ ವುಹಾನ್ ಎಂದಿನಂತೆ ಕಾರ್ಯನಿರ್ವಹಿಸಲಿದೆ. ವಿಮಾನ ಸಂಚಾರ ಸಹ ಪುನಾರಂಭವಾಗಲಿದೆ.

ಅಲ್ಲಿ ಕರೋನಾ ರೋಗ ಬಂದಿದ್ದೇ ಸುಳ್ಳು ಎನ್ನುವ ರೀತಿಯಲ್ಲಿ ಚೀನಿಯರು ಆ ರೋಗವನ್ನು ಕಟ್ಟಿಹಾಕುವಲ್ಲಿ ಯಶಸ್ವಿ ಆಗಿದ್ದಾರೆ. ಅಷ್ಟೇ ಅಲ್ಲ, ವುಹಾನ್‌ನಲ್ಲಿ ಹುಟ್ಟಿಕೊಂಡ ಕರೋನಾ, ಜಗತ್ತಿನ ಇನ್ನಿತರ ಖಂಡಗಳಿಗೆ, ದೇಶಗಳಿಗೆ ಹಬ್ಬಿರಬಹುದು, ಆದರೆ ಚೀನಾದ ಇತರ ಪ್ರದೇಶಗಳಿಗೆ ಹರಡದಂತೆ ಎಚ್ಚರವಹಿಸಿದರು. ಅಂದರೆ ಹುಟ್ಟಿದಷ್ಟೇ ಬಹುಬೇಗ ಅದನ್ನು ನಿಯಂತ್ರಣಕ್ಕೆ ತಂದರು. ಆದರೆ ನಮ್ಮ ದೇಶದಲ್ಲಿ ಈ ರೋಗ ಈಗ ಎಲ್ಲಾ ರಾಜ್ಯಗಳಿಗೂ ಹಬ್ಬಿಬಿಟ್ಟಿದೆ. ಇಡೀ ದೇಶವೇ ಕರೋನಾ ಭೀತಿಯಿಂದ ನಡುಗುತ್ತಿದೆ, ನರಳುತ್ತಿದೆ. ಯಾವ ಕ್ಷಣದಲ್ಲಾದರೂ ಸಾವು-ನೋವು ಹೆಚ್ಚಾಗುವ ಭೀತಿಯಿದೆ. ಚೀನಾಕ್ಕಿಂತ ಭಾರತವೇ ಅತಿ ಹೆಚ್ಚು ದುಷ್ಪರಿಣಾಮಕ್ಕೆ ತುತ್ತಾಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಇಂದು ಚೀನಾದಲ್ಲಿ ಹಬ್ಬಿದ ಈ ಸೋಂಕು ನಾಳೆ ಭಾರತಕ್ಕೂ ಬರಬಹುದು ಎಂಬ ಯೋಚನೆ ನಮಗಿರಲಿಲ್ಲವಾ? ಚೀನಾದಲ್ಲಿ ಹುಟ್ಟಿದ ಮಹಾಮಾರಿ ಅಮೆರಿಕ, ಯುರೋಪ್‌ಗೂ ಹರಡಿದ ನಂತರ ಭಾರತಕ್ಕೂ ಬಂದೇ ಬರುತ್ತದೆ ಎನ್ನುವುದನ್ನು ತಿಳಿಯದಷ್ಟು ದಡ್ಡರಾ ನಾವು ? ಚೀನಾಕ್ಕಿಂತ ಹೆಚ್ಚಾಗಿ ಇಟಲಿ ಈ ರೋಗಕ್ಕೆ ತತ್ತರಿಸಿದಾಗಲೂ ನಾವು ಎಚ್ಚೆತ್ತುಕೊಳ್ಳಲಿಲ್ಲ. ಆಗಲೂ ಎಲ್ಲೋ ಮನಸ್ಸಿನ ಮೂಲೆಯಲ್ಲಿ ನಮಗೂ ಈ ಭೀತಿ ಇತ್ತು. ಆದರೂ ನಾವು ಕ್ರಮಕ್ಕೆ ಮುಂದಾಗಲಿಲ್ಲ, ಸರಿ, ಸೋಂಕು ತಗುಲಿದೆ ಎಂದು ಗೊತ್ತಾಗುತ್ತಿದ್ದಂತೆ ಅದನ್ನು ಬೇರೆಯವರಿಗೆ ಅಂಟಿಸುವುದಾ? ಈ ಸೋ ಕಾಲ್ಡ್ ಎಜುಕೇಟೆಡ್ ಮನಸ್ಸು ಅದೆಷ್ಟು ಕುಲಗೆಟ್ಟಿರಬಹುದು? ಅದೆಷ್ಟು ಹೊಣೆಗೇಡಿಯಾಗಿರಬಹುದು? ಊಹಿಸಲೂ ಅಸಾಧ್ಯ. ವಿದೇಶಗಳಿಂದ ಬಂದವರೇ ಇದನ್ನು ತಂದಿದ್ದಾರೆಂದರೆ ಅವರೇನು ಹಳ್ಳಿಮುಕ್ಕರಾ? ವಿದೇಶಗಳಿಂದ ಬಂದವರು ಊರೂರು ಅಳೆಯುವ ಬದಲು, ಸ್ವಯಂ ಗೃಹ ಬಂಧನಕ್ಕೊಳಗಾಗಿದ್ದರೆ (Self & Quarantine) ಈ ಸಮಸ್ಯೆಯೇ ಉದ್ಭವಿಸುತ್ತಿರಲಿಲ್ಲ. ಯಾರೋ ಕೆಲವರು ಮಾಡಿದ ಈ ಹುಡುಗಾಟಕ್ಕೆ ಇಡೀ ದೇಶಕ್ಕೆ ದೇಶವೇ ಇಪ್ಪತ್ತೊಂದು ದಿನಗಳ ತನಕ ಲಾಕ್ ಡೌನ್ ಮಾಡಬೇಕಾದ ತುರ್ತುಸ್ಥಿತಿ ನಿರ್ಮಾಣವಾಗಿದೆ.

ಮೊನ್ನೆ ಪ್ರಧಾನಿ ಮೋದಿ ಅವರು ಏನು ಹೇಳಿದರು? ಕರೋನಾ ವೈರಸ್ ಹರಡಿರುವ ಹಿನ್ನೆಲೆಯಲ್ಲಿ, ರೋಗಿಗಳನ್ನು ಹಗಲಿರುಳೆನ್ನದೇ ಶುಶ್ರೂಷೆ ಮಾಡುತ್ತಿರುವ ವೈದ್ಯರು, ದಾದಿಯರಿಗೆ ಕೃತಜ್ಞತೆ ಸಲ್ಲಿಸಲು ಮೊನ್ನೆ ಮಾರ್ಚ್ ಇಪ್ಪತ್ತೆರಡರಂದು ಸಾಯಂಕಾಲ ಐದು ಗಂಟೆಗೆ ನಿಮ್ಮ ನಿಮ್ಮ ಮನೆಯ ಬಾಲ್ಕನಿಗೆ ಬಂದು ಚಪ್ಪಾಳೆ ಹೊಡೆಯಿರಿ ಎಂದು ಮನವಿ ಮಾಡಿಕೊಂಡರು. ಆದರೆ ನಮ್ಮ ಜನ ಮಾಡಿದ್ದೇನು? ಅಂದು ಜನ ಗುಂಪು ಗುಂಪಾಗಿ ಬೀದಿಗಿಳಿದು ಮೆರವಣಿಗೆಯಲ್ಲಿ ಜೈಕಾರ ಹಾಕುತ್ತಾ, ಕುಣಿದು ಕುಪ್ಪಳಿಸಿದರು. ಕೆಲವು ಕಡೆ ಸಾವಿರಾರು ಜನ ಸೇರಿ ಸಂಭ್ರಮಾಚರಣೆ ಮಾಡಿದರು. ಭಾರತ ಮತ್ತು ಪಾಕಿಸ್ತಾನ ಕ್ರಿಕೆಟ್ ಪಂದ್ಯದಲ್ಲಿ ಭಾರತ ಗೆದ್ದಾಗ ಕುಣಿದು ಕುಪ್ಪಳಿಸುತ್ತಾರಲ್ಲ, ಆ ರೀತಿ ಜನ ಖುಷಿ ಪಟ್ಟರು. ನಮ್ಮ ದೇಶದಿಂದ ಕರೋನಾ ವೈರಸ್ಸನ್ನು ಓಡಿಸಿಯೇ ಬಿಟ್ಟೆವು ಎಂಬ ಅಮಿತಾನಂದ ಅವರ ಮುಖದಲ್ಲಿತ್ತು. ಹಾಗೆ ನೋಡಿದರೆ, ಈ ರೀತಿ ಕುಣಿದು ಕುಪ್ಪಳಿಸಿದವರೆಲ್ಲ ಹಳ್ಳಿ ಜನರಲ್ಲ, ಇವರೆಲ್ಲರೂ ಸುಶಿಕ್ಷಿತರೇ, ಎಜುಕೇಟೆಡ್ ಜನರೇ. ತಾವು ಗುಂಪಾಗಿ ಸೇರುವುದರಿಂದ ಸೋಂಕು ರೋಗ ಬಹಳ ಕ್ಷಿಪ್ರ ಗತಿಯಲ್ಲಿ ಹರಡುತ್ತದೆ ಎಂಬ ಸಾಮಾನ್ಯ ಜ್ಞಾನವೂ ಇರಲಿಲ್ಲ. ಹಾಗಿದ್ದಿದ್ದರೆ ಅವರಾರೂ ಅಂಥ ದುಸ್ಸಾಹಸಕ್ಕೆ ಇಳಿಯುತ್ತಿರಲಿಲ್ಲ.

ಇಂಥ ಸುಶಿಕ್ಷಿತ ಜನರೇ ಮಹಾ ಅಪಾಯಕಾರಿಗಳು ಎಂದು ಪ್ರಧಾನಿ ಮೋದಿಯವರಿಗೂ ಅನಿಸಿರಬೇಕು. ಇಪ್ಪತ್ತೊಂದು ದಿನಗಳ ಲಾಕ್ ಡೌನ್ ಘೋಷಿಸಿದ್ದಾರೆ. ಇವರನ್ನು ಮನೆಯಲ್ಲಿ ಇಡುವುದೊಂದೇ ಈ ಮಹಾಮಾರಿ ಹರಡದಂತೆ ತಡೆಯುವ ಕ್ರಮ ಎಂಬ ಮಾತನ್ನು ತಮ್ಮ ಮಾತಿನಲ್ಲಿ ಒತ್ತಿ ಒತ್ತಿ ಹೇಳಿದ್ದಾರೆ.

ಪ್ರಾಯಶ ಯಾವ ದೇಶವೂ ಇತಿಹಾಸದಲ್ಲಿ ಇಪ್ಪತ್ತೊಂದು ದಿನಗಳ ವರೆಗೆ ಲಾಕ್ ಡೌನ್ ಆಗಿರಲಿಲ್ಲ. ಇದೊಂದು ಅತ್ಯಂತ ದಿಟ್ಟ ನಿರ್ಧಾರ. ತುರ್ತುಪರಿಸ್ಥಿತಿ ಘೋಷಿಸಿದಾಗಲೂ ದೇಶಕ್ಕೆ ದೇಶವೇ ಲಾಕ್ ಆಗಿರಲಿಲ್ಲ, ಆಗ ವಿಮಾನ, ರೈಲು, ಬಸ್ ಸಂಚಾರ ಇತ್ತು. ಅಂಗಡಿಗಳು ತೆರೆದಿದ್ದವು. ಜನಜೀವನ ಸಹಜವಾಗಿತ್ತು. ಇಪ್ಪತ್ತೊಂದು ದಿನಗಳ ಲಾಕ್ ಡೌನ್ ಘೋಷಿಸಿದ್ದರಿಂದ ಜನರಿಗೆ ಸಹಜವಾಗಿ ತೊಂದರೆ ಆಗುತ್ತದೆ. ಆದರೆ ವಿಧಿ ಇಲ್ಲ, ಇಲ್ಲದಿದ್ದರೆ ಲಕ್ಷಾಂತರ ಜನ ಸಾಯುವ ಸಾಧ್ಯತೆ ಇದೆ. ಆಗ ದೇಶ ಇಪ್ಪತ್ತೊಂದು ವರ್ಷ ಹಿಂದಕ್ಕೆ ಹೋಗಬಹುದು. ಇವೆಲ್ಲವನ್ನೂ ಗಮನಿಸಿಯೇ ಮೋದಿ ಅವರು ಈ ನಿರ್ಧಾರಕ್ಕೆ ಬಂದಿರುವುದು.

ಸುಶಿಕ್ಷಿತರು ವಿವೇಕವಂತರಾಗದಿದ್ದರೆ ದೇಶ ಎಂಥ ಬೆಲೆ ತೆರಬೇಕಾಗುತ್ತದೆ ಎಂಬುದನ್ನು ಕರೋನಾ ವೈರಸ್ ನಿಂದ ನಾವು ಕಲಿಯಬಹುದಾದ ಪಾಠವಾಗಿದೆ. ಸುಶಿಕ್ಷಿತ ಜನರೆನಿಸಿಕೊಂಡವರು ಇನ್ನಷ್ಟು ಜವಾಬ್ದಾರಿಯಿಂದ ವರ್ತಿಸಬೇಕೆನ್ನುವ ಸಂದೇಶವನ್ನು ನಮಗೆ ಕರೋನಾ ನೀಡಿದೆ. ಇನ್ನೂ ನಾವು ಅರ್ಥ ಮಾಡಿಕೊಳ್ಳದಿದ್ದರೆ, ಯಾರೂ ನಮ್ಮನ್ನು ರಕ್ಷಿಸಲಾರರು!

I am sorry !!

ಕರೋನಾ ತಡೆ: ಪ್ರತ್ಯೇಕತೆಯಲ್ಲಿ ಏಕತೆ

ಜನಮನ

ಜನಾರ್ದನ ಸ್ವಾಮಿ ಲೋಕಸಭೆ ಮಾಜಿ ಸದಸ್ಯ
vveditoped@gmail.com

ಕರೋನ ಖಂಡಿತಾ ಕೆಟ್ಟದ್ದು. ಕಳೆದ ನಾಲ್ಕು ದಿನದ ಅಂಕಿ ಅಂಶಗಳನ್ನು ನೋಡಿದರೆ ಕರೋನ ಪ್ರತಿ ದಿನ ಸುಮಾರು ಶೇ.24ರಷ್ಟು ಹೆಚ್ಚಾಗುತ್ತಿದೆ. ಇದೇ ಸ್ಪೀಡಿನಲ್ಲಿ ಹೋದರೆ, ಮೇ ತಿಂಗಳ ಕೊನೆಗೆ, ಅಂದರೆ ಇನ್ನೆರಡು ತಿಂಗಳಿನಲ್ಲೇ ಇಡೀ ದೇಶವೇ, ಅಂದರೆ 140 ಕೋಟಿ ಜನ ಕರೋನಾಕ್ಕೆ ಶರಣಾಗಬೇಕಾಗುತ್ತದೆ. ಇದು ಗಾಬರಿ ಹುಟ್ಟಿಸುವ ವಿಚಾರವೇ. ನಿಜ, ಎಲ್ಲರೂ ಇದಕ್ಕೆ ಜೀವ ಕಳೆದುಕೊಳ್ಳುವುದಿಲ್ಲ. ಆದರೆ ಸೋಂಕಿಗೆ ತುತ್ತಾದವರಲ್ಲಿ ಶೇ.3ರಷ್ಟು ಜನಕ್ಕೆ ಇದು ಪ್ರಾಣಾಪಾಯಕಾರಿಯಾದರೂ, ಸುಮಾರು ಕೋಟಿ ಜನ ಪ್ರಾಣ ಕಳೆದುಕೊಳ್ಳಬೇಕಾಗುತ್ತದೆ. ಪ್ರತೀ ರಾಜ್ಯದಲ್ಲಿ, ಅಂದರೆ ಕರ್ನಾಟಕವೂ ಸೇರಿ, ಲಕ್ಷ ಸಂಖ್ಯೆಯಲ್ಲಿ ಸಾವು ನೋಡಬೇಕಾಗುತ್ತದೆ. ಇದಕ್ಕೆ ಪರಿಹಾರವೇನು?

ಎಲ್ಲರಿಗೂ ಸಾಮ್ಯಾನ್ಯವಾಗಿ ಹೀಗಾಗಲೇ ತಿಳಿದಿರುವ ಹಾಗೆ ಸದ್ಯಕ್ಕೆ ಕರೋನಕ್ಕೆ ಮದ್ದಿಲ್ಲ. ಅನೇಕರು ಹೇಳುವ ಪ್ರಕಾರ ಕರೋನಕ್ಕೆ ಪರಿಹಾರ ಒದಗಿಸಲು ಇನ್ನು ಕೆಲವು ತಿಂಗಳು ಆಗಬಹುದು, ಅಥವಾ ವರ್ಷಗಳೇ ಆಗಬಹುದು. ಹೀಗಾಗಿ ಅದಕ್ಕೆ ಕಾಯುವ ಸಮಯ ಇದಲ್ಲ. ಕೊರೋನ ಬರದಂತೆ ತಡೆಯುವುದು ಒಂದೇ ನಮಗಿರುವ ಸದ್ಯದ ಪರಿಹಾರ. ಒಳ್ಳೆಯ ಸುದ್ದಿಯೆಂದರೆ ಕೋರೋನವನ್ನೂ ತಡೆಯಬಹುದು. ಆದರೆ ದಾರಿ ಅಂದುಕೊಂಡಷ್ಟು ಸುಲಭವಲ್ಲ. ತಪಸ್ಸಿನಂತೆ ಪಾಲಿಸಬೇಕು. ಪಾಲಿಸಿ ಗೆಲ್ಲಲೇಬೇಕು. ಹೇಗೆ?

ಕರೋನ ತಡೆಯಲು ಇರುವ ಪ್ರಮುಖ ದಾರಿ ಎಂದರೆ ಪ್ರತಿಯೊಬ್ಬರೂ ಮತ್ತೊಬ್ಬರಿಂದ ದೂರವಿರುವುದು, ಹೀಗಾಗಿ ಈ ರೋಗವನ್ನು ಮತ್ತೊಬ್ಬರಿಗೆ ಹರಡದಂತೆ ತಡೆಯುವುದು. ಇದು ಈ ರೋಗವನ್ನು ತಡೆಯುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಹಾಗೇ ಬೇರೆಯವರು ಮುಟ್ಟಿದ ವಸ್ತುವನ್ನು ಮುಟ್ಟದಿರುವುದು, ಅಕಸ್ಮಾತ್ ಮುಟ್ಟಿದರೆ ಸೋಪಿನಿಂದ ನೀರಿನಲ್ಲಿ ಕೈತೊಳೆದುಕೊಳ್ಳುವುದು, ಯಾವುದೇ ಕಾರಣಕ್ಕೂ ಸ್ವಚ್ಛವಿಲ್ಲದ ಕೈಗಳಿಂದ ಮೂಗು, ಬಾಯಿ ಮತ್ತು ಕಣ್ಣುಗಳನ್ನು ಮುಟ್ಟದಿರುವುದು. ಸುರಕ್ಷತೆಗಾಗಿ ವೈರಸ್ ತಡೆಯುವ ಮಾಸ್ಕ್ ಧರಿಸುವುದು.

ಹೌದು, ಇದೆಲ್ಲ ಬಹಳ ಕಷ್ಟ. ದಿನಸಿಗೆ, ತರಕಾರಿಗಳಿಗೆ ಹೊರ ಹೋಗಲೇಬೇಕು. ಮನೆಯಲ್ಲಿ ಚಿಕ್ಕ ಮಕ್ಕಳಿರಬಹುದು, ವಯಸ್ಸಾದ ತಂದೆ ತಾಯಿಗಳಿರಬಹುದು, ಗರ್ಭಿಣಿ ಮಹಿಳೆಯರಿರಬಹುದು, ವೈದ್ಯಕೀಯ ಸಮಸ್ಯೆಗಳಿಂದ ಬಳಲುವವರಿರಬಹುದು. ಹೀಗೆ ಹೊರ ಬರಲು ಸಾಕಷ್ಟು ಕಾರಣಗಳಿರುತ್ತವೆ. ಅವುಗಳೆಲ್ಲವೂ ಗಂಭೀರವಾದ ಸಮಸ್ಯೆಗಳೇ. ಆದರೆ, ಕರೋನ ವೈರಸ್ ಬಂದಾಗ ಅನುಭವಿಸುವ ಅಥವಾ ಪ್ರಾಣ ಕಳೆದುಕೊಳ್ಳುವುದಕ್ಕಿಂತ ಅವು ಕಷ್ಟವೇ? ಹೇಗೋ ಇದ್ದುದುರಲ್ಲೇ ಬದುಕಿಕೊಳ್ಳುವುದು ಮುಖ್ಯ. ಇದೇ ಸಂದರ್ಭದಲ್ಲಿ ಎಲ್ಲರೂ ಇತರರ ಬಗ್ಗೆ ಸಹಾನುಭೂತಿಯೊಂದಿಗೆ, ಸಹಾಯದ ಮನೋಭಾವನೆಯಿಂದ ನಡೆದುಕೊಳ್ಳಬೇಕಿದೆ.

ಎಂದೋ ಎಚ್ಚೆತ್ತಿದ್ದರೆ ಕರೋನವನ್ನು ನಮ್ಮ ದೇಶದಲ್ಲಿಯೇ ಬಿಡದಂತೆ ಮಾಡಬಹುದಿತ್ತು ಎನ್ನುವುದು ನಿಜ. ಆದರೆ ಭಾರತವಲ್ಲ, ಅನೇಕ ದೇಶಗಳೂ ಈ ತಪ್ಪು ಮಾಡಿ ಒದ್ದಾಡುತ್ತಿಲ್ಲವೆ? ಆದರೆ ಭಾರತದ ಮಟ್ಟಿಗೆ ಸೋಂಕಿನ ಸಂಖ್ಯೆ ಹೆಚ್ಚಿಲ್ಲದಿರುವುದರಲ್ಲಿ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರ ಪಾತ್ರ ಹೆಚ್ಚಿದೆ. ಈಗ ಪ್ರಧಾನ ಮಂತ್ರಿಗಳು 21 ದಿನಗಳ ಕಾಲ ದೇಶಾದ್ಯಂತ ಲಾಕ್ ಡೌನ್‌ಗೆ ನಿರ್ಧಾರ ಮಾಡಿ ಆದೇಶ ಮಾಡಿರುವುದು ಬಹಳ ದೊಡ್ಡ ವಿಚಾರ. ಇದೊಂದು ರೀತಿ ಮೂರನೇ ಮಹಾಯುದ್ಧದ ರೀತಿ ದೇಶ ಹೋರಾಡಬೇಕಿದೆ. ಎರಡನೇ ಮಹಾಯುದ್ಧದಲ್ಲಿ ಲಕ್ಷಾಂತರ ಜನ ಭಾರತೀಯರು ಪ್ರಾಣ ಕಳೆದುಕೊಂಡರು. ಆದರೆ ಇಲ್ಲಿ ಹಾಗಾಗುವುದಿಲ್ಲ. ಈ ಯುದ್ಧ ಗೆಲ್ಲಲು ಕೇವಲ ಮನೆಯಲ್ಲಿದ್ದರೆ ಸಾಕು. ಆದರೆ ಬರೀ ಮನೆಯಲ್ಲಿರುವುದು ಅನೇಕರಿಗೆ ಸುಲಭದ ಮಾತಲ್ಲ. ಹೇಳುವುದು ಸುಲಭ. ಆದರೆ ಆಚರಣೆ ಕಷ್ಟವೆನಿಸಬಹುದು. ಇದು ಕಷ್ಟವೆನಿಸಿದರೆ ಅನ್ಯ ಮಾರ್ಗವೇನಿದೆ? ಅತ್ತ ದರಿ ಇತ್ತ ಪುಲಿ ಎಂಬಂತಾಗಿದೆ ಸಾಮಾನ್ಯ ಜನರ ಪರಿಸ್ಥಿತಿ.

ಇಂತಹ ಪರಿಸ್ಥಿತಿಯನ್ನು ಎಲ್ಲರೂ ಅರ್ಥ ಮಾಡಿಕೊಳ್ಳುತ್ತಾರೆ. ಕರೋನ ಹೆಸರೇನು ಹೊಸದಲ್ಲ. ಆದರೆ ಸರಕಾರಗಳು ಕೂಡ ಯೋಚಿಸಬೇಕು ಜನ ಯಾವುದಕ್ಕೆ ಹೊರಗೆ ಬರಬೇಕಾಗುತ್ತೆ ಅಂತ. ಬಹುತೇಕ ಜನ ಹೊರಗೆ ಬರಬೇಕಾಗುವುದು ಆಹಾರಕ್ಕೆ. ಆಹಾರಕ್ಕೆ ದಾರಿಯಾದರೆ ಮನೆಯಿಂದ ಹೊರಬರುವ ಅನಿವಾರ್ಯತೆ ಕಡಿಮೆಯಾಗುತ್ತದೆ. ಸರಕಾರ ಈ ನಿಟ್ಟಿನಲ್ಲಿ ಯೋಚಿಸಬೇಕಿದೆ. ಹೌದು, ಎಲ್ಲರಿಗೂ ಆಹಾರದ ದಾರಿ ಒದಗಿಸುವುದು ಸರಕಾರಕ್ಕೆ ಬಹಳ ಕಷ್ಟದ ಕೆಲಸವೇ. ಆದರೆ ಎಲ್ಲಾ ಕಂಟ್ರೋಲ್ ಇರುವ ಸರಕಾರಕ್ಕೆ ಕಷ್ಟವಾದರೆ ಅಥವಾ ಸರಕಾರವೇ ಕೈಚೆಲ್ಲಿದರೆ ಜನಸಾಮಾನ್ಯರ ಗತಿ ಏನು?



ಸಾಮಾನ್ಯ ಜನರಿಗೆ ಇದು ಹೇಗೆ ಸಾಧ್ಯವಾಗಬಹುದು. ದಿನಸಿ ತರಕಾರಿ ಹಾಲು ಹಣ್ಣು ಹೀಗೆ ಹಲವು ವಿಚಾರಗಳಿಗೆ ಜನ ಹೊರ ಬಂದರೆ ಮತ್ತೆ ಇದು ಸೋಂಕಿಗೆ ದಾರಿ ಮಾಡಿಕೊಳ್ಳುವುದಿಲ್ಲವೇ? ಸರಕಾರ ಜನರ ಆಹಾರಕ್ಕೆ, ಅದರಲ್ಲೂ ನಗರದಲ್ಲಿನ ಜನ ಸಮಾನ್ಯರ, ಅದರಲ್ಲೂ ಮುಖ್ಯವಾಗಿ ದಿನಗೂಲಿ ಕೆಲಸಗಾರರ ಮನೆಯಲ್ಲಿ ಬದುಕಲು ಅಲ್ಲಲ್ಲಿಗೇ ನೇರವಾಗಿ ಸ್ವಲ್ಪವಾದರೂ ಆಹಾರ ಕೊಡುವುದಾದರೆ ಹೆಚ್ಚು ಜನ ಹೊರಬರುವುದನ್ನು ತಡೆಯಬಹುದು. ಆಹಾರ ಮತ್ತು ನೀರು ಹೀಗೆ ಕೆಲವೇ ಕೆಲವು ಅಗತ್ಯಗಳನ್ನು ಸೋಂಕಿನಿಂದ ಮುಕ್ತವಾಗಿ ವಿತರಿಸುವ ವ್ಯವಸ್ಥೆಯನ್ನು ಹುಟ್ಟುಹಾಕಬೇಕಾಗಿದೆ. ಜತೆಗೆ ಉಚಿತ ವೈದ್ಯಕೀಯ ಮತ್ತು ವಿದ್ಯುತ್ ನೀಡಿದರೆ ಈ ಸಂದರ್ಭದಲ್ಲಿ ಒಳ್ಳೆಯದು. ಹೌದು ಸರಕಾರದ ಬೊಕ್ಕಸಕ್ಕೆ ನಷ್ಟವಾಗಬಹುದು. ಕೆಲವು ಸೇತುವೆ, ರಸ್ತೆ, ಕೆರೆ ಕಟ್ಟುವ ಕೆಲಸ ನಿಲ್ಲಬಹುದು. ಆದರೆ ಜನ ಬದುಕುಳಿಯುವುದು ಅವೆಲ್ಲವಕ್ಕಿಂತ ಮುಖ್ಯವಲ್ಲವೆ? ಹಾಗೆಯೇ ಫೋನ್, ಮೊಬೈಲ್ ಫೋನ್, ಟಿವಿ, ರೇಡಿಯೋ ಮತ್ತು ಇಂಟರ್ನೆಟ್ ಸಂಪರ್ಕಕ್ಕೆ ತೊಂದರೆ ಆಗದಿದ್ದರೆ ಜನ ಮನೆಯಿಂದ ಹೊರಬರಲು ಬಹುತೇಕ ಕಾರಣಗಳೇ ಇರುವುದಿಲ್ಲ. ವಿಶೇಷ ಸಂದರ್ಭದಲ್ಲಿ, ಉದಾಹರಣೆಗೆ ಹಾಸ್ಟಲ್ಲಿನ ವಿದ್ಯಾರ್ಥಿಗಳು ಹಾಸ್ಟಲ್ ಕ್ಲೋಸ್ ಆದರೆ ಮನೆಗೆ ಬರಲು, ಆಸ್ಪತ್ರೆಯಲ್ಲಿನ ಗುಣಮುಖವಾದ ವ್ಯಕ್ತಿ ಮನೆಗೆ ಹೋಗುವುದು, ಹೀಗೆ ಕೆಲವು ಸನ್ನಿವೇಶಗಳಲ್ಲಿ ಮಾತ್ರ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತವಾಗಿ ಪರಿಗಣಿಸಿ ಪರಿಶೀಲಿಸಿ ಪ್ರಯಾಣಕ್ಕೆ ಅನುವು ಮಾಡಿಕೊಡುವುದು. ಸರಕಾರಿ ವಾಹನಗಳನ್ನೇ ಇದಕ್ಕೆ ಬಳಸಬಹುದು.

ನಂತರ ಒಂದು ಲಕ್ಷ ಜನ ಕರ್ನಾಟಕದಲ್ಲಿ ಸೋಂಕಿತರಾದರೆ, ಅದಕ್ಕೆ ಬೇಕಾಗಿರುವ ತಾತ್ಕಾಲಿಕ ಮತ್ತು ಸುಸಜ್ಜಿತ ಆಸ್ಪತ್ರೆಗಳನ್ನು ಸಮರೋಪಾದಿಯಲ್ಲಿ ನಿರ್ಮಿಸಿಕೊಳ್ಳಬೇಕಿದೆ. ವೆಂಟಿಲೇಟರ್ ಮಾಸ್ಕ್‌ಗಳು, ಗ್ಲೌಸುಗಳು, ಮೊದಲು ತರಿಸಿಕೊಳ್ಳಬೇಕಿದೆ. ಇಲ್ಲವೇ ಏನು ಸಾಧ್ಯವೋ ಅದನ್ನು ತಯಾರಿಸಿಕೊಳ್ಳಬೇಕಿದೆ. ಸರಕಾರಕ್ಕೆ ಎಲ್ಲ ತಜ್ಞರ ಸಹಾಯ ಸರಕಾರ ಪಡೆದುಕೊಳ್ಳಬೇಕಾಗುತ್ತೆ. ಇದು ಕೇವಲ ಕೆಲವು ಅಧಿಕಾರಿಗಳಿಂದ ಆಗುವ ಕೆಲಸವಲ್ಲ. ಎಲ್ಲ ಪಕ್ಷದವರ ಎಲ್ಲ ತಜ್ಞರ ಸಹಾಯಕ್ಕೆ ಸರಕಾರ ಓಪನ್ ಆಗಿರಬೇಕು. ನಾನು ಮಂತ್ರಿ ನಾನು ಈ ಅಧಿಕಾರಿ ನಾನು ಆ ಅಧಿಕಾರಿ ಎಂಬ ಭಾವನೆಗಳಿಂದ ಹೊರಬರಬೇಕಾಗಿದೆ.

ಅಂದಹಾಗೆ ಜ್ವರ ಚೆಕ್ ಮಾಡಿ ಕರೋನಾ ವೈರಸ್ ಬಂದಿದೆಯೇ ಇಲ್ಲವೇ ಎಂದು ತಿಳಿಯುವ ಗ್ಯಾರಂಟಿ ಅಲ್ಲ. ಅದು ನಮ್ಮ ಅಧಿಕಾರಿಗಳಿಗೆ ಹೊಳೆಯಲಿಲ್ಲವೇ? ಒಂದು ಸಂಪೂರ್ಣ ಟೆಸ್ಟ್ ಮಾಡಬೇಕು. ಇಲ್ಲವೇ ಕನಿಷ್ಟ ಎರಡು ವಾರ ಪ್ರತ್ಯೇಕವಾಗಿರಬೇಕು. ಕರೋನಾ ರೋಗಿ ಸ್ವಲ್ಪ ದಿನಗಳ ನಂತರ ಜ್ವರದ ಲಕ್ಷಣ ಕಾಣಿಸಿಕೊಳ್ಳಬಹುದು. ಅಂದರೆ ಜ್ವರ ಇಲ್ಲವೆಂದ ಮಾತ್ರಕ್ಕೆ ಅವರು ಕರೋನಾ ಸೋಂಕಿತ ವ್ಯಕ್ತಿ ಅಲ್ಲ ಎಂದು ಹೇಳಲು ಬರುವುದಿಲ್ಲ. ಹೀಗಾಗಿ ಇದು ಒಂದು ಅವಲಂಬಿಸಬಹುದಾದ ಪರೀಕ್ಷೆಯಲ್ಲ.

ಏನೇ ಇರಲಿ, ಇಂದಿನಿಂದ ಪ್ರಧಾನಿಗಳು ಹೇಳಿದ ಹಾಗೆ ನಾವೆಲ್ಲರೂ ಪಾಲಿಸಬೇಕಿದೆ. ಇದಕ್ಕೆ ಪ್ರತಿಯೊಬ್ಬರ ಸಹಕಾರ ಅತ್ಯಗತ್ಯ. ಅನ್ಯ ಮಾರ್ಗವಿಲ್ಲ. ಜತೆಗೆ ರಾಜ್ಯ ಸರಕಾರವೂ ಶಕ್ತಿ ಮೀರಿ ತನ್ನ ಪ್ರಯತ್ನ ಮಾಡುತ್ತಿದೆ. ಎಲ್ಲ ಜನಪ್ರತಿನಿಧಿಗಳು, ವೈದ್ಯರು, ವೈದ್ಯಕೀಯ ಸಿಬ್ಬಂದಿ, ಮಾಧ್ಯಮ, ಹೀಗೆ ಅನೇಕರು ಮತ್ತು ಸ್ವಯಂಸೇವಕರು ತಮ್ಮನ್ನು ತಾವು ನೋಡಿಕೊಳ್ಳುವುದರ ಜತೆಗೆ ತಮ್ಮ ಜವಾಬ್ದಾರಿ ನಿರ್ವಹಿಸಿ ಇತರರನ್ನೂ ಕಾಪಾಡುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದಾರೆ. ಅವರಿಗೆ ಕೃತಜ್ಞತೆಯಿಂದ ಇರೋಣ. ನಮ್ಮೆಲ್ಲ ಬೆಂಬಲ ಸಹಕಾರ ನೀಡೋಣ. ಇಂತಹ ಸಂದರ್ಭದಲ್ಲಿ ತಪ್ಪು ಹುಡುಕುವುದು ತುಂಬಾ ಸುಲಭ. ಆರೋಪ ಪ್ರತ್ಯಾರೋಪ ತಪ್ಪಿದ್ದಲ್ಲ. ಕೋಪ ಅಸಹನೆ ಸಹಜ. ಆದರೆ ಅದನ್ನು ಮೀರಿದ ನಡವಳಿಕೆಯನ್ನು ನಾವೆಲ್ಲರೂ ರೂಪಿಸಿಕೊಳ್ಳೋಣ. ಕೆಸರೆರಚಾಟಕ್ಕೆ ಇದು ಸಮಯವಲ್ಲ. ಯಾವಾಗಲೂ ಪರಿಹಾರದ ಒಂದು ಭಾಗವಾಗಿ ಕೆಲಸ ಮಾಡೋಣ. ಭಾರತ ಅನೇಕ ಪರೀಕ್ಷೆಗಳನ್ನು ಪಾಸು ಮಾಡಿದೆ. ಇದು ಇನ್ನೊಂದು ಪರಿಕ್ಷೆ. ಇದನ್ನೂ ಎದುರಿಸೋಣ. ಸುರಕ್ಷಿತವಾಗಿರಿ. ಧೈರ್ಯವಾಗಿರಿ. ಮತ್ತೆ ಒಳ್ಳೆಯ ದಿನಗಳನ್ನು ಭಾರತ ಮತ್ತು ವಿಶ್ವ ನೋಡಲಿದೆ.